ಕುನ್ನೀರು ಕಟ್ಟೆ ಚನ್ನಪಟ್ಟಣದ ಒಂದು ಜೀವನಾಡಿ. ಬಹುತೇಕ ಜನರು ಆ ಕಟ್ಟೆಯನ್ನು ಅವಲಂಬಿಸಿರುವುದರಿಂದ ಅದನ್ನು ಒಡೆದರೆ ಉಗ್ರ ಪ್ರತಿಭಟನೆ ಬರುತ್ತದೆ. ಜೊತೆಗೆ ಅದು ಸಾಧುವಲ್ಲವೆಂದು ನನ್ನ ಭಾವನೆ. ಆದ್ದರಿಂದ ಅದನ್ನು ಬಿಟ್ಟು ಸಿಲ್ಕ್ ಫಾರಂ ಕಡೆ ಇರತಕ್ಕ ಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡು ಅಲ್ಲಿ ಸೈಟುಗಳನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.— ತಮ್ಮ ಅಭಿಪ್ರಾಯದ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಅದಕ್ಕೆ ತಡೆಯಾಜ್ಞೆ ನೀಡಿದ್ದಾರೆ. ಸಿಲ್ಕ್ ಫಾರಂ ಕಡೆ ಇರತಕ್ಕ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೇವೆ.

Second stage of Milk producing Scheme

3181 SRI M. S. ATMANANDA (Mandya) Will the Minister for law and Parlimentary Affairs and Veterinary and Animal Husbandry be pleased to state :—

(a) whether the second stage of more milk produce scheme has come into force ;

(b) if it is not so, the action proposed to be taken by Government to give effect immediately ?

SRI Y. RAMAKRISHNA (Minister for Law and Parliamentary Affairs and Veterinary and Animal Husbandry).—

(a) No

(b) The matter is under active consideration of Government.

ಶ್ರೀ ಎಂ. ಎಸ್. ಆತ್ಮಾನಂದ.— ತಮ್ಮ ಉತ್ತರದಲ್ಲಿ ಅಧಿಕ ಕ್ಷೀರೋತ್ಪಾದನಾ ಯೋಜನೆಯ ೨ನೇ ಹಂತ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲವೆಂದೂ ಮತ್ತು ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದು ರೈತರಿಗೆ ಬಹಳ ಅಮೂಲ್ಯವಾದ ಯೋಜನೆಯಾಗಿರುತ್ತದೆ ಈ ಯೋಜನೆಯನ್ನು ಎಷ್ಟು ಕಾಲದಲ್ಲಿ ಸರ್ಕಾರ ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡುತ್ತದೆ ಹಾಗೂ ಈ ಯೋಜನೆಯ ಅನ್ವಯ ಎಷ್ಟು ಜಿಲ್ಲೆಗಳಿಗೆ ಆಗುತ್ತದೆ ?

ಶ್ರೀ ವೈ. ರಾಮಕೃಷ್ಣ.—ಕೆ. ಡಿ. ಡಿ. ಸಿ. ವಿಧಿಯ ಎಂದು ೬ ಜಿಲ್ಲೆಗಳು ಏನಿವೆ ಅವುಗಳನ್ನು ಬಿಟ್ಟು ಉಳಿದ ಎಲ್ಲ ಜಿಲ್ಲೆಗಳು ಈ ಒಂದು ಯೋಜನೆಯ ವ್ಯಾಪ್ತಿಗೆ ಬರುತ್ತವೆ. ಎರಡನೆಯದಾಗಿ, ಈ ವಿಚಾರದ ಬಗ್ಗೆ ಇಂಡಿಯನ್ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನೊಡನೆ ವ್ಯವಹರಿಸುತ್ತಿದ್ದೇವೆ ಅದು ಪೂರ್ಣವಾದ ಮೇಲೆ ಅತಿ ಶೀಘ್ರವಾಗಿ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಇದು ಸುಮಾರು ೬೦ ಕೋಟಿ ರೂಪಾಯಿಗಳ ಯೋಜನೆ. ಇದಕ್ಕೆ ರಾಜ್ಯ ಸರ್ಕಾರದವರು ಒಪ್ಪಿದರೆ ೨೦ ಕೋಟಿ ರೂಪಾಯಿಗಳ ಧನ ಸಹಾಯ ನ್ಯಾಷನಲ್ ಡೇರಿ ಡೆವಲಪ್‌ಮೆಂಟ್ ಬೋರ್ಡ್‌ನಿಂದ ಬರುತ್ತದೆ. ಈ ಬಗ್ಗೆ ನ್ಯಾಷನಲ್ ಡೇರಿ ಡೆವಲಪ್‌ಮೆಂಟ್ ಬೋರ್ಡ್ ಸರ್ಕಾರಕ್ಕೆ ಕಳೆದ ೩ ವರ್ಷಗಳಿಂದ ಒತ್ತಡ ಹಾಕುತ್ತಿದೆ. ಕೇರಳ, ತಮಿಳ್ನಾಡು, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಸರ್ಕಾರಗಳು ೪ ವರ್ಷಗಳ ಹಿಂದೆಯೇ ಒಪ್ಪಿಕೊಂಡು ಈ ಯೋಜನೆಯನ್ನು ಜಾರಿಗೆ ತಂದಿರುವಾಗ ಕರ್ನಾಟಕ ರಾಜ್ಯದವರು ಇದುವರೆಗೆ ಈ ಯೋಜನೆಯನ್ನು ಒಪ್ಪಿಕೊಳ್ಳದೆ ಇರುವುದಕ್ಕೆ ಕಾರಣವೇನು ?

ಶ್ರೀ ವೈ. ರಾಮಕೃಷ್ಣ.— ಇದರ ಬಗ್ಗೆ ಕೇಂದ್ರದೊಡನೆ ಮಾತುಕತೆ ನಡೆಸುತ್ತಿದ್ದೇವೆ ಎಂದು ನಾನು ಆಗಲೇ ತಿಳಿಸಿದ್ದೇನೆ.

ಅಧ್ಯಕ್ಷರು.—೩ ವರ್ಷವಾಯಿತು. ೨೦ ಕೋಟಿ ರೂಪಾಯಿ ಲ್ಯಾಪ್ಸ್ ಆಗುತ್ತಿದೆ ಅನ್ನುತ್ತಾರೆ.

ಶ್ರೀ ವೈ. ರಾಮಕೃಷ್ಣ — ಈ ಯೋಜನೆಯನ್ನು ಕೆ. ಡಿ. ಡಿ. ಸಿ. ವ್ಯಾಪ್ತಿಗೆ ಬರುವ ೬ ಜಿಲ್ಲೆಗಳನ್ನು ಬಿಟ್ಟು ರಾಜ್ಯದ ಉಳಿದೆಲ್ಲ ಜಿಲ್ಲೆಗಳಿಗೂ ಅನ್ವಯಿಸಬೇಕಾಗಿರುವುದರಿಂದ ಆ ಬಗ್ಗೆ ಮಾತುಕತೆ ನಡೆಯುತ್ತಿದೆ. ಅದು ಪೂರ್ಣವಾದ ಮೇಲೆ ಹೇಳುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ.— ಈ ಯೋಜನಾ ವ್ಯಾಪ್ತಿಯಲ್ಲಿ ಚಿತ್ರದುರ್ಗ ಜಿಲ್ಲೆ ಸೇರಿದೆಯೇ ? ಸೇರಿದ್ದರೆ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.— ಸೇರಿದೆ. ಕೆ. ಡಿ. ಡಿ. ಸಿ. ಏರಿಯ ಬಿಟ್ಟು ಉಳಿದೆಲ್ಲ ಜಿಲ್ಲೆಗಳು ಸೇರಿವೆ.

ಶ್ರೀ ಎಂ. ಎಸ್. ಆತ್ಮಾನಂದ.—ಈ ಹಿಂದೆ ಇದೇ ಸದನದಲ್ಲಿ ಮಾನ್ಯ ಮಂತ್ರಿಗಳು ಉತ್ಪಾದಕರಿಂದಲೇ ಕೂಡಿದ ಫೆಡರೇಷನ್ ಸ್ಥಾಪಿಸುವ ಬಗ್ಗೆ ಆಶ್ವಾಸನೆ ನೀಡಿದ್ದರು. ಆ ದಿಸೆಯಲ್ಲಿ ಸರ್ಕಾರದ ಪ್ರಯತ್ನ ಎಲ್ಲಿಯವರೆಗೆ ಸಾಗಿದೆ ?

ಶ್ರೀ ವೈ. ರಾಮಂಕೃಷ್ಣ.—ಅದನ್ನು ಕೂಡ ಈ ಯೋಜನೆಯಲ್ಲಿ ಅಳವಡಿಸಿದ್ದೇವೆ. ಇದು ಅಂತಿಮ ತೀರ್ಮಾನವಾದಾಗ ಅದೂ ಸಹ ತೀರ್ಮಾನವಾಗುತ್ತದೆ.

Sanction of Government Junior College at Huliyur, Chicknayakanahally Taluk

211 SRI T.B. JAYACHANDRA (Kallembella) Will the Minister for Education be pleased to state :—

(a) whether there is any request from the public and proposal by the Government to open Government Junior College at Huliyar. Chicknayakanahally Taluk, Tumkur District;

(b) whether the question was examined if so, what is the result;

(c) whether the Government intend to sanction a Junior college at least in the next budget year;

(d) whether the Government is aware that there is urgent necessity of Government Junior College at Huliyar ?

SRI G.B. SHANKAR RAO (Minister for Education).—

(a) Yes

(b) Yes and the proposal was deferred for the academic year 1980-81.

(c) The Government (Ex-Taluk Development Board) High School. Huliyar, Chicknayakanahally Taluk, Tumkur District has been upgraded to composite Junior College from the academic year 1981-82.

(d) Yes

ಶ್ರೀ ಟಿ. ಬಿ. ಜಯಚಂದ್ರ.—ಬಹುದಿನಗಳ ಬೇಡಿಕೆಯನ್ನು ಈಡೇರಿಸಿ ಇವತ್ತಿನ ದಿವಸ ಕಾಲೇಜನ್ನು ಪ್ರಾರಂಭ ಮಾಡಿರುವುದು ಸ್ವಾಗತಾರ್ಹವಾದುದು ಮತ್ತು ಅದಕ್ಕಾಗಿ ಸರ್ಕಾರಕ್ಕೆ ಅಭಿ